**ಓಎಸ್. ನಂ.22/2022**

**ಪಿಡಬ್ಲೂ : 01**

**ಇಂದು ದಿನಾಂಕ:12.07.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 2 ನೇ ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ಎಸ್. ವಕೀಲರಿಂದಃ**

ಕೇಸು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ಕೇಸನ್ನು ನಮ್ಮ ಯಜಮಾನರು ಹಾಕಿದ್ದಾರೆ. ನನ್ನ ಮದುವೆ ಆಗಿ 28 ವರ್ಷ ಆಗಿದೆ. ನಿಶ್ಚಯ ಮಾಡಿ ನಂತರ ಮದುವೆ ಆಗಿದೆ. ನನ್ನ ತಂದೆಯ ಊರು ಮಾಕೊಡು. ವಾದಿ ಮತ್ತು ಪ್ರತಿವಾದಿ ಕುಟುಂಬದ ಬಗ್ಗೆ ನನಗೆ ಮದುವೆ ಆದ ನಂತರದ ಮಾಹಿತಿ ಇದೆ. 1996 ರಲ್ಲಿ ನನ್ನ ಮದುವೆ ಆಗಿದೆ. ಅದಕೂ ಮೊದಲು ವಾದಿ ಮತುತ ಪ್ರತಿವಾದಿ ಕುಟುಬಂದ ಬಗ್ಗೆ ಆಗಿರುವ ವ್ಯವಹಾರ ಮಾಹಿತಿ ನನಗೆ ಇರಲ್ಲಿಲ ಎಂದರೆ ಸರಿ, ಆದರೆ ನನ್ನ ಯಜಮಾನರು ಹೇಳಿದಾರೆ. ಈ ಕೇಸು ಹಾಕಿದ ನಂತರ ನನ್ನ ಯಜಮಾನರು ಹಾಜರು ಆಗುತ್ತಿದ್ದರು ಎಂದರೆ ಸರಿ. ನನ್ನ ಯಜಮಾನರಿಗೆ ನರ ಸಂಬಂಧಿ ತೊಂದರೆ ಇರುವುದರಿಂದ ಅವರು ನ್ಯಾಯಾಲಯಕ್ಕೆ ಬರುವುದು ಸಾಧ್ಯವಾಗುತ್ತಿಲ್ಲ ಆದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ. ನನ್ನ ಯಜಮಾನರಿಗೆ ನರ ಸಂಬಂಧಿ ತೊಂದರೆ ಇರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಕೊಟ್ಟಿದ್ದೇನೆ. ನನ್ನ ಯಜಮಾನರಿಗೆ ಯಾವುದೇ ತೊಂದರೆ ಇರುವುದಿಲ್ಲ, ಅವರು ಬಂದು ಸಾಕ್ಷ್ಯ ಹೇಳಿದರೆ ಸತ್ಯಾಂಶ ಹೊರ ಬರುತ್ತದೆ ಎಂದು ನಾನೇ ಬಂದು ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ ಸಂಬಂಧಿಸಿದ ಯಾವುದೇ ವೈದ್ಯಕಿಯ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ.8 ರಿಂದ 16 ರಲ್ಲಿ ಇರುವ ಆಸ್ತಿಗಳು ಕರೀಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಾನು ಪ್ರತ್ಯೇಕವಾಗಿ ವಾಸ ಇದ್ದೇನೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಗಳಲ್ಲೇರೂ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ನನಗೆ ಮತ್ತು ಎಲ್ಲ ಪ್ರತಿವಾದಿಗಳಿಗೆ ಬೇರೆ ಬೇರೆ ರೇಷನ್ ಕಾರ್ಡ್ ಇದೆ ಎಂದರೆ ಸರಿ. 1990 ರಿಂದ ನವು ಎಲ್ಲರೂ ಬೇರೆ ಬೇರೆ ರೇಷನ್ ಕಾರ್ಡ್ ಎಗೆದುಕೊಂಡಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದೊಳ್ಳೇಗೌಡ ಮತ್ತು ನಿಂಗೇಗೌಡ ಎಂಬ ಇಬ್ಬರೂ ಸಹೋದರರು ಎಂದರೆ ಸರಿ.

1 ನೇ ಪ್ರತಿವಾದಿ ಮತ್ತು ಅವರ ಸಹೋದರರು 1972 ರಲ್ಲಿ ವಿಭಾಗ ಮಾಡಿಕೊಂಡಾಗ ದಾವಾ ಐಟಂ.8 ರಿಂದ 16 ರಲ್ಲಿನ ಆಸ್ತಿಗಳು 1 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿ. ದಾವಾ ಐಟಂ.8 ರಿಂದ 16

ರಲ್ಲಿ ಇರುವ ಆಸ್ತಿಗಳೆಲ್ಲ ಮಳೆ ಆಶ್ರಿತ ಜಮೀನು ಎಂದರೆ ಸರಿಯಲ್ಲ. ಕೆಳವು ಗದ್ದೆಗಳು ಇವೆ. ಅವೆಲ್ಲವೂ ಬರಡು ಭೂಮಿಗಳು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ ಆದ್ದರಿಂದ ಆ ಜಮೀನಿನಲ್ಲಿ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.8 ರಿಂದ 16 ರ ಆಸ್ತಿಗಳಲ್ಲಿ ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. 1975 ರಲ್ಲಿ 2 ನೇ ಪ್ರತಿವಾದಿ ಎಸ್.ಎಸ್.ಎಲ್.ಸಿ. ಉತೀರ್ಣರಾಗಿದ್ದು, 1984 ರಲ್ಲಿ ಪೋಲೀಸ್ ನೌಕರಿಗೆ ಸೇರಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಕುಟುಂಬದಲ್ಲಿ 2 ನೇ ಪ್ರತಿವಾದಿಯೊಬ್ಬರೇ ದುಡಿಯುತ್ತಿದ್ದರು ಎಂದರೆ ಸರಿಯಲ್ಲ. 5 ಜನ ಅಣ್ಣ ತಮ್ಮಂದಿರು ದುಡಿಯುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಗೆ ಬರುತ್ತಿದ್ದ ವೇತನದಲ್ಲಿ ದಾವಾ ಐಟಂ.1 ರಿಂದ 4 ರ ಆಸ್ತಿಗಳನ್ನು 1 ನೇ ಪ್ರತಿವಾದಿ ಹೆಸರಿನಲ್ಲಿ ದಿನಾಂಕಃ 29-03-1996 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಯಾರ ಹೆಸರಿನಲ್ಲಿ ಆರ್.ಟಿ.ಸಿ. ಇದೆಯಾ ಅವರು ಮಾತ್ರ ಜಮೀನು ಖರೀದಿಸಬೇಕು ಎಂದು ನಿಯಮ ಇತ್ತು ಎಂದರೆ ಸರಿ. ಆ ಕಾರಣದಿಂದ 2 ನೇ ಪ್ರತಿವಾದಿ ಹೆಸರಿನಲ್ಲಿ ಆರ್.ಟಿ.ಸಿ. ಇಲ್ಲದಿದ್ದ ಕಾರಣ 1 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.2/5 ರಲ್ಲಿ ಮೊದಲು 36 ಗುಂಟೆ ಇತ್ತು ಎಂದರೆ ಗೊತ್ತಿಲ್ಲ. ದಿನಾಂಕಃ 15-06-1992 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಸರ್ವೆ ನಂ.2/5 ರಲ್ಲಿ ಜಂಟಿಯಾಗಿ 36 ಗುಂಟೆ ಖರೀದಿಸಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ.7 ರ ಆಸ್ತಿಯನ್ನು 2 ನೇ ಪ್ರತಿವಾದಿ ದಿನಾಂಕಃ 07-02-1990 ರ 1 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದವಾ ಐಟಂ.1 ರಿಂದ 7 ರ ಆಸ್ತಿಗಳನ್ನು 2 ನೇ ಪ್ರತಿವಾದಿ ತನ್ನ ವೇತನದಿಂದ 1 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 1989 ರಲ್ಲಿ ವಾದಿ ಮತ್ತು ಪ್ರತಿವಾದಿಗಳು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುದರಿಂದ ದಾವಾ ಐಟಂ.1 ರಿಂದ 7 ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ.1 ರಿಂದ 7 ರ ಆಸ್ತಿಗಳನ್ನು ಅಡಮಾನ ಮಾಡಿ ಪ್ರತಿವಾದಿ 1 ಮತ್ತು 2 ರವರು ಸಾಲ ಮಾಡಿ ಸಾಲ ಪಡೆದಿದ್ದಾರೆ ಎಂದರೆ ಅವರು ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಆ ಸಾಲವನ್ನು 2 ನೇ ಪ್ರತಿವಾದಿಯೇ ತೀರಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಬೇರೆ ಬೇರೆ

ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಆ ಮನೆಗಳು ಸಹಾ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆ ಪ್ರತಿವಾದಿ 2 ಮತ್ತು 3 ರವರು ವಾಸವಿರುವ ಮನೆ ಎಂದು ಗುರುತಿಸಿರುವ ಮೇರೆಗೆ **ನಿ.ಡಿ.1** ಎಂದು ಗುರುತಿಸಲಾಯಿತು. ಮತ್ತೊಂದು ಫೋಟೋವನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆ ಬೇರೆಯವರದ್ದು ಆ ಮನೆಯ ಸಂಬಂಧ 2 ನೇ ಪ್ರತಿವಾದಿ ಸರ್ಕಾರದಿಂದ ಬರುವ ಪರಿಹಾರವನ್ನು ಪಡೆದುಕೊಂಡಿದ್ದರು ಆ ಹಣವನ್ನು ನಮಗೆ ಕೊಡುತ್ತಿದ್ದಾರೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಫೋಟೋವನ್ನು **ನಿ.ಡಿ.2** ಎಂದು ಗುರುತಿಸಲಾಯಿತು. ನಾನು ಮತ್ತು ಪ್ರತಿವಾದಿಗಳು ಇರುವ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳ ಸಂಬಂದ, 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ.1 ರಿಂದ 7 ರ ಆಸ್ತಿಗಳು ಒಟ್ಟು ಕುಟುಂಬದ ಅಸ್ತಿಗಳು ಅಲ್ಲ, ಆದ್ದರಿಂದ ಸದರಿ ಆಸ್ತಿಗಳಿಗೂ ನಮಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಕರೀಗೌಡರಿಗೆ ಸೇರಿದ ಎಲ್ಲ ಆಸ್ತಿಗಳನ್ನು ದಾವೆಯಲ್ಲಿ ಸೇರಿಸದೆ ಕೆಲವು ಆಸ್ತಿಗಳಿಗೆ ಮಾತ್ರ ದಾವಾ ಸಲ್ಲಿಸಿರುವುದರಿಂದ ನಾವು ಸಲ್ಲಿಸಿರುವ ದಾವೆ ಕಾನೂನು ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು ನನ್ನ ಪರವಾಗಿ ಸಾಮಾನ್ಯ ಅಧೀಕಾರ ಪತ್ರ ಬರೆದುಕೊಟ್ಟಿಲ್ಲ, ಆದ್ದರಿಂದ ಅಂತಹ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**